# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

ದಿನಾಂಕ:22.03.2016ರಂದು ಬೆಳಗ್ಗೆ 11.00 ಗಂಟೆಗೆ ನಿಗಮದ ಕೇಂದ್ರ ಕಚೇರಿಯಲ್ಲಿರುವ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ನಿಗಮದ 211ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳು:

ಹಾಜರಾತಿ:

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಗಂಗಾರಾಮ್ ಬಡೇರಿಯಾ, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| ಶ್ರೀ ಭೋಜ್ಯಾನಾಯಕ್, ಡಿ.ಐ.ಜಿ.ಆರ್<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯರು |

ಗೈರು ಹಾಜರಿ:

| | |
|---|---|
| ಶ್ರೀಮತಿ ಎಂ.ವಿ. ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು (ಕಲ್ಯಾಣ)<br>ಆರ್ಥಿಕ ಇಲಾಖೆ | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |

ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ಹಾಜರಿದ್ದ ನಿರ್ದೇಶಕರ ಮಂಡಳಿಯ ಇತರೆ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿಕೊಂಡ ನಂತರ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. 211ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. 211ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 01: 209 ಮತ್ತು 210ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು.**

* * * * *

ದಿನಾಂಕ: 28.10.2015 ಮತ್ತು 22.12.2015 ರಂದು ನಡೆದ 209 ಮತ್ತು 210ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

ನಿರ್ಣಯ: **ಸದಸ್ಯರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿ ಸ್ಥಿರೀಕರಿಸಲು ಸಭೆಯು ನಿರ್ಣಯಿಸಿತು.**

ವಿಷಯ ಸಂಖ್ಯೆ:2: **ನಿಗಮದ 209 ಮತ್ತು 210ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ**

209 ಮತ್ತು 210ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ವಿವರಿಸಲಾಯಿತು.

ನಿರ್ಣಯ: **ಅನುಸರಣಾ ವರದಿಯನ್ನು ಸಭೆಯು ಅವಗಾಹಿಸಿ ಅಂಗೀಕರಿಸಿತು.**

ವಿಷಯ ಸಂಖ್ಯೆ: 03 **:ಶ್ರೀ ದಶರಥ ಎ.ವಾಡಿ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಸೇವೆಯಿಂದ ವಜಾಗೊಂಡ ನೌಕರರು ಇವರನ್ನು ಕಲಬುರಗಿ ಉಚ್ಛನ್ಯಾಯಾಲಯದ ತೀರ್ಪಿನಂತೆ ಸೇವೆಗೆ ಪುನರ್ ನೇಮಿಸುವ ಬಗ್ಗೆ.**

ಶ್ರೀ ದಶರಥ ಎ.ವಾಡಿ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ (ಸೇವೆಯಿಂದ ವಜಾಗೊಂಡ ನೌಕರರು) ರಾಯಚೂರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ ಅನುಷ್ಠಾನದಲ್ಲಿ ಅವ್ಯವಹಾರವೆಸಗಿರುವ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾದ ಹಿನ್ನಲೆಯಲ್ಲಿ ದಿನಾಂಕ 17.03.2006ರಂದು ಇವರನ್ನು ಸೇವೆಯಿಂದ ತೆಗೆದು ಹಾಕಲಾಗಿದೆ. ಸದರಿ ಆದೇಶದ ವಿರುದ್ಧ ಇವರು ಉಚ್ಛ ನ್ಯಾಯಾಲಯ, ಕಲಬುರಗಿ ಪೀಠದಲ್ಲಿ ರಿಟ್ ಪಿಟಿಷನ್ ದಾಖಲಿಸಿದ್ದು, ಮೊಕದ್ದಮೆಯ ತೀರ್ಪು ದಿನಾಂಕ 11.03.2015ರಂದು ಹೊರಬಂದಿರುತ್ತದೆ. ದಂಡನೆ ನೀಡಿರುವ ಪ್ರಾಧಿಕಾರ ಸರಿಇಲ್ಲವೆಂದು ಘನ ನ್ಯಾಯಾಲಯವು ದಿನಾಂಕ:17.03.2006ರಂದು

ನಿಗಮದಿಂದ ನೀಡಿರುವ ಆದೇಶವನ್ನು ಬದಿಗಿರಿಸಿ ಸದರಿ ನೌಕರರಿಗೆ ದಿನಾಂಕ:17.03.2006ರಿಂದ ಶೇ:50% ವೇತನ ಪಾವತಿಸಲು ಮತ್ತು ಸೇವೆಯಲ್ಲಿ ಮುಂದುವರೆಸಲು ಸೂಚಿಸಿದೆ. ಆರೋಪಿತ ನೌಕರರ ಮೇಲಿನ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಉಚ್ಛನ್ಯಾಯಾಲಯದಲ್ಲಿ ನಿಗಮದ ಪರವಾಗಿ ಅಫೀಲು ಸಲ್ಲಿಸಲು ಶ್ರೀ ಗೌರೀಶ್ ಎನ್ ಕಾಶಂಪೂರ್, ಹೈಕೋರ್ಟ್ ಅಡ್ವೋಕೇಟ್, ಇವರಿಗೆ ಕೋರಲಾಗಿದ್ದು ಕಲಬುರಗಿ ಉಚ್ಛ ನ್ಯಾಯಾಲಯದಲ್ಲಿ ದಿನಾಂಕ 18.03.2016ರಂದು ಹೊರಡಿಸಿದ ತೀರ್ಪಿನಲ್ಲಿ ಶ್ರೀ ದಶರಥ ಎ.ವಾಡಿ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಗೆ ಪುನರ್ ನೇಮಿಸಲು (Reinstate him Forth with) ಆದೇಶಿಸಲಾಗಿದೆ ಹಾಗೂ ಇವರಿಗೆ ನೀಡುವ ಹಿಂದಿನ ವೇತನ ಬಾಕಿ, ಭತ್ಯೆಗಳ ಬಗ್ಗೆ ಕೆಲವೊಂದು ಷರತ್ತುಗಳನ್ವಯ ಕ್ರಮವಹಿಸಲು ಸೂಚಿಸಲಾಗಿದೆ. ಘನ ನ್ಯಾಯಾಲಯದ ತೀರ್ಪಿನ ಆದೇಶ ಹೊರಬಂದಿರುವುದಿಲ್ಲ. (Judgement copy yet to issue).

ಮುಂದುವರಿದು, ಶ್ರೀ ದಶರಥ ಎ.ವಾಡಿ, ಇವರ ವಯೋನಿವೃತ್ತಿ ವಯಸ್ಸು ದಿನಾಂಕ: 31.03.2016ಕ್ಕೆ ಮುಕ್ತಾಯವಾಗಲಿದೆ. ಮೇಲಿನ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಈ ನೌಕರರನ್ನು ತಕ್ಷಣದಿಂದ ಕೆಲಸದ ಮೇಲೆ ತೆಗೆದುಕೊಳ್ಳುವ ಬಗ್ಗೆ ಮಂಡಳಿ ಸಭೆಯು ಪರಿಶೀಲಿಸಿತು.

ನಿರ್ಣಯ: **ವಿಷಯವನ್ನು ಪರಾಂಭರಿಸಿದ ನಿರ್ದೇಶಕರ ಮಂಡಳಿಯು ನ್ಯಾಯಾಲಯದ ಆದೇಶದಂತೆ ಶ್ರೀ ದಶರಥ.ಎ.ವಾಡಿ ಇವರನ್ನು ಕೂಡಲೇ ಸೇವೆಗೆ ಪುನರ್ ನೇಮಿಸುವ ಸಂಬಂಧ ಸಂಬಂಧಿಸಿದ ವಕೀಲರಿಂದ ಅಭಿಪ್ರಾಯ ಪಡೆದುಕೊಂಡು ನಂತರ ನಿಯಮಾನುಸಾರ ಪುನರ್‌ನೇಮಕ ಮಾಡಿಕೊಳ್ಳುವ ಬಗ್ಗೆ ಕ್ರಮವಹಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿ ನಿರ್ಣಯಿಸಲಾಯಿತು.**

ವಿಷಯ ಸಂಖ್ಯೆ: 04 : **ಭೂ ಒಡೆತನ ಯೋಜನೆಯಡಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ ಸೇರಿದ ಭೂಮಿ ಖರೀದಿ ಪ್ರಸ್ತಾವನೆಗೆ ಮಂಜೂರಾತಿ ನೀಡುವ ಕುರಿತು.**

ನಿಗಮದ ಭೂ ಒಡೆತನ ಯೋಜನೆಯಡಿ 2013-14ನೇ ಸಾಲಿನ ಗುರಿಯಲ್ಲಿ ರಾಯಚೂರು ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ ರಾಂಪುರ, ಶ್ರೀರಾಮನಗರ ಕ್ಯಾಂಪ್, ಸಿದ್ದನಬಾವಿ ಕ್ಯಾಂಪ್‌ನ 07 ಭೂ ಮಾಲೀಕರಿಗೆ ಸಂಬಂಧಿಸಿದ ರಾಂಪುರ ಗ್ರಾಮಕ್ಕೆ ಸೇರಿದ ರಾಂಪುರ ಸೀಮಾಂತರದ ಸರ್ವೆ ನಂ.245/1, 106/2, 150/2, 112/1ಅ, 112/1ಆ ಮತ್ತು 152/1ಗಳ ಒಟ್ಟು 22.34 ಎಕರೆ ತರಿ ಜಮೀನನ್ನು ರೂ.163.87ಲಕ್ಷ ವೆಚ್ಚದಲ್ಲಿ ಖರೀದಿಸಿ ರಾಯಚೂರು ತಾಲ್ಲೂಕಿನ, ರಾಂಪುರ, ಶ್ರೀರಾಮನಗರ ಕ್ಯಾಂಪ್ ಹಾಗೂ ಸಿದ್ದನಬಾವಿ ಕ್ಯಾಂಪ್ ನಿವಾಸಿಗಳಾದ 23 ಫಲಾಪೇಕ್ಷಿಗಳಿಗೆ ಹಂಚಿಕೆ ಮಾಡಲು ದಿನಾಂಕ:06.06.2014ರಂದು ಜರುಗಿದ ಜಿಲ್ಲಾ ಸಮಿತಿಯಲ್ಲಿ ಅನುಮೋದನೆಯಾದ ಪ್ರಸ್ತಾವನೆಗೆ ಮಂಜೂರಾತಿ ನೀಡಲು ಉಲ್ಲೇಖ-(1) ಮತ್ತು(2)ರ ಪತ್ರದಲ್ಲಿ ಜಿಲ್ಲಾ ವ್ಯವಸ್ಥಾಪಕರು, ರಾಯಚೂರು ಜಿಲ್ಲೆ ಇವರು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡಿದ್ದು, ಪ್ರಸ್ತಾವನೆಯಲ್ಲಿನ ಎಲ್ಲಾ 23 ಫಲಾಪೇಕ್ಷಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿರುವುದಿಲ್ಲ ಹಾಗೂ ಸದರಿ ಜಮೀನುಗಳು ಇರುವ ಸ್ಥಳ ರಾಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದರೂ ಸಹ 15 ವರ್ಷಗಳ ಹಿಂದೆಯೇ ರಾಯಚೂರು ನಗರಸಭಾ ವ್ಯಾಪ್ತಿಗೆ ಸೇರಿರುತ್ತವೆ ಎಂದು ವರದಿ ಮಾಡಿದ್ದರು.

ನಿಗಮದ ನಿಯಮಾನುಸಾರ ಭೂ ಒಡೆತನ ಯೋಜನೆಯಡಿ ಖರೀದಿಸುವ ಕೃಷಿ ಜಮೀನು ಗ್ರಾಮೀಣ ಪ್ರಾಂತ್ಯದ ಭೂ ರಹಿತ ಕೃಷಿಕಾರ್ಮಿಕರಿಗೆ ಮಾತ್ರ ಅನ್ವಯಿಸುವುದು ಹಾಗೂ ಜಮೀನು ಖರೀದಿಸುವಾಗ ಕೃಷಿಗೆ ಯೋಗ್ಯವಾದ ಜಮೀನನ್ನು ಮಾತ್ರ ಖರೀದಿಸತಕ್ಕದ್ದು ಎಂದು ಸರ್ಕಾರಿ ಆದೇಶ ಸಂಖ್ಯೆ:ಸಕಇ 79 ಎಸ್‌ಡಿಸಿ

2012, ದಿನಾಂಕ:13.06.2012ರಲ್ಲಿ ಆದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಜಮೀನುಗಳನ್ನು ಭೂ ಒಡೆತನ ಯೋಜನೆಯಡಿ ಪರಿಗಣಿಸುವ ಸಂಬಂಧ ದಿನಾಂಕ:3.08.2015ರಂದು ಜರುಗಿದ 207ನೇ ನಿರ್ದೇಶಕರ ಮಂಡಳ ಸಭೆಯಲ್ಲಿ ಫಲಾಪೇಕ್ಷಿಗಳ ನೈಜತೆ ಬಗ್ಗೆ ಹಾಗೂ ಖರೀದಿಸಲು ಉದ್ದೇಶಿಸಿರುವ ಜಮೀನುಗಳು ಸಿ.ಡಿ.ಪಿ ಒಳಗೆ ಬರುತ್ತವೆಯೋ ಎಂಬುದನ್ನು ಪರಿಶೀಲಿಸಿ ವರದಿ ಪಡೆಯಲು ನಿರ್ಣಯಿಸಿರುತ್ತದೆ.

207ನೇ ನಿರ್ದೇಶಕರ ಮಂಡಳ ಸಭೆಯ ತೀರ್ಮಾನದಂತೆ ಉಪ ಪ್ರಧಾನ ವ್ಯವಸ್ಥಾಪಕರು, ಮೈಸೂರು ವಿಭಾಗ, ಇವರು ದಿನಾಂಕ:30.09.2015ರಂದು ಸ್ಥಳಕ್ಕೆ ಭೇಟಿ ನೀಡಿ ಈ ಕೆಳಕಂಡಂತೆ ಪರಿಶೀಲನಾ ವರದಿ ನೀಡಿರುತ್ತಾರೆ.

1. ಫಲಾಪೇಕ್ಷಿಗಳ ಕುಟುಂಬದಲ್ಲಿ ಯಾರು ಸರ್ಕಾರಿ, ಅರೇ ಸರ್ಕಾರಿ ನೌಕರರು ಇರುವುದಿಲ್ಲ ಎಂಬ ಅಂಶ ಸ್ಥಳ ಪರಿಶೀಲನೆಯಲ್ಲಿ ಹಾಗೂ ಅವರೊಡನೆ ಚರ್ಚಿಸಿದಾಗ ಕಂಡು ಬರುತ್ತದೆ.
2. ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು ರವರು ನಿಗಮದಿಂದ ಖರೀದಿಸಲು ಉದ್ದೇಶಿಸಿರುವ "ಜಮೀನುಗಳು ಅಂತಿಮ ಅನುಮೋದನೆಗೊಂಡ ರಾಯಚೂರು ಮಹಾ ಯೋಜನೆಯ ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ"ಎಂದು ದಿನಾಂಕ:18.09.2015ರಲ್ಲಿ ವರದಿ ಸಲ್ಲಿಸಿರುತ್ತಾರೆ. ಈ ಸಂಬಂಧ ಜಿಲ್ಲಾ ವ್ಯವಸ್ಥಾಪಕರು ರಾಯಚೂರು ರವರೊಂದಿಗೆ ದಿನಾಂಕ:30.09.2015ರಂದು ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಶ್ರೀ ಪೂಜಾರ ವೀರಮಲ್ಲಪ್ಪ ಕೆ.ಎ.ಎಸ್. ರವರನ್ನು ಭೇಟಿ ಮಾಡಿ, ಈ ಕುರಿತು ಚರ್ಚಿಸಲಾಗಿ. ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿದೆ, ಅಂದರೆ, ಸದರಿ ಜಮೀನುಗಳನ್ನು ಕೃಷಿ ಉದ್ದೇಶಕ್ಕೆ ಯಾರಾದರೂ ಖರೀದಿಸಬಹುದಾಗಿದೆ. ಅಥವಾ ಮಾರಾಟ ಮಾಡಬಹುದಾಗಿರುತ್ತದೆ ಎಂದು ಭೂ ಮಾಲೀಕರಿಂದ ಒಟ್ಟು 22.34 ಎಕರೆ ಜಮೀನನ್ನು ನಿಗಮದಿಂದ ಖರೀದಿಸಿಕೊಡಲು ಉದ್ದೇಶಿಸಿರುವ 23 ಫಲಾಪೇಕ್ಷಿಗಳು ಸಿದ್ಧನಬಾವಿ ಶ್ರೀರಾಂಪುರ, ಶ್ರೀರಾಮನಗರ ಕ್ಯಾಂಪಿನ ವಾಸಿಗಳಾಗಿರುತ್ತಾರೆ. ಸದರಿ ಕ್ಯಾಂಪ್‌ಗಳು ರಾಯಚೂರು ನಗರದ ಹೊರವಲಯದಲ್ಲಿದ್ದು, ಇವುಗಳು ರಾಯಚೂರು ನಗರಸಭೆಯ 35ನೇ ವಾರ್ಡಿಗೆ ಸೇರಿರುವುದರಿಂದ ಫಲಾಪೇಕ್ಷಿಗಳು ನಗರ ವ್ಯಾಪ್ತಿಗೆ ಬರುತ್ತಿದ್ದು, ಸಹಜವಾಗಿ ಫಲಾಪೇಕ್ಷಿಗಳು ಗ್ರಾಮ ಸಭೆಯಲ್ಲಿ ಆಯ್ಕೆಯಾಗಿರುವುದಿಲ್ಲ ಎಂದು ನೀಡಿರುವ ವರದಿಯನ್ನು ನಿರ್ದೇಶಕರ ಮಂಡಳ ಸಭೆಯು ಪರಿಶೀಲಿಸಿತು.

ಮಾನ್ಯ ಅಧ್ಯಕ್ಷರು ಮಾತನಾಡಿ ರಾಯಚೂರು ಜಿಲ್ಲೆಯಲ್ಲಿ ಭೂ ಒಡೆತನ ಯೋಜನೆಯಡಿ ಸಾಕಷ್ಟು ದೂರುಗಳು ಬರುತ್ತಿವೆ ಮತ್ತು ಹಿಂದೆಯೂ ಈ ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನದಲ್ಲಿ ಲೋಪವಾಗಿರುವುದರಿಂದ ಪ್ರಸ್ತಾವನೆಯನ್ನು ಸಧ್ಯಕ್ಕೆ ಬಾಕಿ ಇಡಲು ಅಭಿಪ್ರಾಯಿಸಿದರು. ಈ ಹಂತದಲ್ಲಿ ಸರ್ಕಾರದ ಕಾರ್ಯದರ್ಶಿಗಳು ಮಾತನಾಡಿ, ಭೂ ಒಡೆತನ ಯೋಜನೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿರುವುದರಿಂದ ಈ ವರ್ಷ ನಿಗಮಕ್ಕೆ ರೂ.75.00ಕೋಟಿ ಅನುದಾನವನ್ನು ಎಸ್.ಸಿ.ಎಸ್.ಪಿ.ಸಿ ಯಿಂದ ಒದಗಿಸಿದ್ದು, ತ್ವರಿತವಾಗಿ ಕಾರ್ಯಕ್ರಮ ಅನುಷ್ಠಾನ ಮಾಡಿ ಪ್ರಗತಿ ಸಾಧಿಸಲು, ಇಲ್ಲವಾದಲ್ಲಿ, ಈ ಮೊತ್ತವನ್ನು ವಾಪಸ್ಸು ಪಡೆಯುವುದಾಗಿ ತಿಳಿಸಿದರು. ಅಧ್ಯಕ್ಷರು ಮಾತನಾಡಿ ಎಲ್ಲಾ ಜಿಲ್ಲೆಗಳಿಗೆ ಸಮಾನವಾದ ಪ್ರಾದಾನ್ಯತೆ ನೀಡಲು ಅನುವಾಗುವಂತೆ ನೋಡಿಕೊಳ್ಳಬೇಕೆಂದೂ ಈ ಕಾರಣದಿಂದ ಸಧ್ಯಕ್ಕೆ ಈ ವಿಷಯವನ್ನು ಮುಂದೂಡಲು ತಿಳಿಸಿದರು. ಎಲ್ಲಾ ಜಿಲ್ಲೆಗಳಿಂದ ಪ್ರಸ್ತಾವನೆಗಳು ಬರುವುದಿಲ್ಲವೆಂದು ಪ್ರಸ್ತಾವನೆಗಳು ಬಂದ ಜಿಲ್ಲೆಗಳ ಪ್ರಕರಣಗಳನ್ನು ವಿಲೇವಾರಿ ಮಾಡಬೇಕೆಂದು ತೀರ್ಮಾನಿಸಿ ದಿನಾಂಕ:28.10.2015ರಂದು ಜರುಗಿದ 209ನೇ ನಿರ್ದೇಶಕರ ಮಂಡಳ ಸಭೆಯು ಮುಂದೂಡಲಾಗಿತ್ತು.

ಈ ಸಂಬಂಧ ಫಲಾಪೇಕ್ಷಿಗಳು ಮತ್ತು ಪರಿಶಿಷ್ಟ ಜಾತಿಯ ವಿವಿಧ ಸಂಘ ಸಂಸ್ಥೆಗಳು ಪ್ರಸ್ತಾಪಿಸಿರುವ ಜಮೀನು ಕೃಷಿಗೆ ಯೋಗ್ಯವಾಗಿದ್ದು, ನೀರಾವರಿಯಾಗಿರುವುದರಿಂದ ಫಲಾಪೇಕ್ಷಿಗಳ ಆರ್ಥಿಕಾಭಿವೃದ್ಧಿಗೆ ಅನುಕೂಲವಾಗಲಿದ್ದು, ತ್ವರಿತವಾಗಿ ಮಂಜೂರು ಮಾಡಲು ಒತ್ತಡ ತರುತ್ತಿರುವ ವಿಷಯವನ್ನು ನಿರ್ದೇಶಕರ ಮಂಡಳ ಸಭೆಯ ಗಮನಕ್ಕೆ ತರಲಾಯಿತು. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಭೂ ಒಡೆತನ ಯೋಜನೆಯು ಉತ್ತಮ ಯೋಜನೆಯಾಗಿದ್ದು, ಅನುದಾನ ಲಭ್ಯವಿರುವುದರಿಂದ ಅರ್ಹವಿರುವ ಎಲ್ಲಾ